# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 324
ಸದಸ್ಯರ ಹೆಸರು :ಶ್ರೀ ಪಿ.ಆರ್.ರಮೇಶ್ (ನಾಮನಿರ್ದೇಶನ ಹೊಂದಿದವರು)
ಉತ್ತರಿಸುವ ದಿನಾಂಕ : 21.12.2022.
ಉತ್ತರಿಸುವ ಸಚಿವರು : ಕಂದಾಯ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಂದಾಯ ಇಲಾಖೆಯಿಂದ, ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ, ಹೋಬಳಿ, ವ್ಯಾಪ್ತಿಯಲ್ಲಿ ಬರುವ ವಸಂತಪುರ ಬಳಿ ಇರುವ ಜಾಗದಲ್ಲಿ ಇಸ್ಕಾನ್ ಸಂಸ್ಥೆಯವರಿಗೆ ನೀಡಿರುವ ಪ್ರದೇಶದ ಒಟ್ಟು ವಿಸ್ತೀರ್ಣ ಎಷ್ಟು; (ಸಂಪೂರ್ಣ ವಿವರವನ್ನು ಒದಗಿಸುವುದು) | ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ, ಹೋಬಳಿ, ವಸಂತಪುರ ಗ್ರಾಮದ ಸ.ನಂ.55 ರಲ್ಲಿ 27-38 ಎ/ಗು ವಿಸ್ತೀರ್ಣದ ಜಮೀನನ್ನು ಇಸ್ಕಾನ್ ಸಂಸ್ಥೆಯವರಿಗೆ ಮಂಜೂರು ಮಾಡಿ ಆದೇಶಿಸಲಾಗಿರುತ್ತದೆ. |
| ಆ) | ಸದರಿ ಜಾಗವನ್ನು ಇಸ್ಕಾನ್ ಸಂಸ್ಥೆಯವರಿಗೆ ನೀಡುವ ಮೊದಲು ಅನುಸರಿಸಿರುವ ಮಾನದಂಡಗಳು ಯಾವುವು; ಸದರಿ ಜಾಗದಲ್ಲಿ ಸರ್ಕಾರದ ಗೋಮಾಳ ಅಥವಾ ಖರಾಬು ಪ್ರದೇಶವು ಇರುತ್ತದೆಯೇ; | ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ, ಹೋಬಳಿ, ವಸಂತಪುರ ಗ್ರಾಮದ ಸ.ನಂ.55 ರಲ್ಲಿ 27-38 ಎ/ಗು ವಿಸ್ತೀರ್ಣದ ಜಮೀನನ್ನು ಇಸ್ಕಾನ್ ಸಂಸ್ಥೆಯವರಿಗೆ ಮಂಜೂರು ಮಾಡುವ ಬಗ್ಗೆ ಕರ್ನಾಟಕ ಭೂ ಮಂಜೂರಾತಿ 1969ರ ಮಾನದಂಡಗಳನ್ವಯ ಮಂಜೂರು ಮಾಡಲಾಗಿರುತ್ತದೆ.<br><br>ಸದರಿ ಜಾಗವು ಕ್ವಾರಿ ಕಲ್ಲುಬಂಡೆ ಜಾಗವಾಗಿದ್ದು, ಇಸ್ಕಾನ್ ಸಂಸ್ಥೆ ಯವರಿಗೆ 27-38 ಎ/ಗು ಪ್ರದೇಶವನ್ನು ಮಂಜೂರು ಮಾಡಲಾಗಿರುತ್ತದೆ. |
| ಇ) | ಸದರಿ ಜಾಗವನ್ನು ಇಸ್ಕಾನ್ ಸಂಸ್ಥೆಯವರಿಗೆ ನೀಡುವ ಮೊದಲು, ಸದರಿ ಜಾಗದಲ್ಲಿ ಹಾಗೂ ಸದರಿ ಜಾಗಕ್ಕೆ ಹೊಂದಿಕೊಂಡಿರುವಂತೆ, ಯಾವುದಾದರೂ ದೇವಸ್ಥಾನ/ಧಾರ್ಮಿಕ ಕೇಂದ್ರಗಳು/ಮಠ ಮಂದಿರಗಳಿಗೆ ಜಾಗವನ್ನು ನೀಡಲಾಗಿರುತ್ತದೆಯೇ/ ಒದಗಿಸಲಾಗಿದೆಯೇ; ಸದರಿ ಜಾಗದಲ್ಲಿ ಮಾಂಡವ್ಯ ಋಷಿಮುನಿಗಳಿಗೆ ಮಠವನ್ನು ನಿರ್ಮಾಣ ಮಾಡಲು ಜಾಗವನ್ನು ಒದಗಿಸಿ ಅನುಮತಿ ನೀಡಲಾಗಿರುತ್ತದೆಯೇ; | ಈ ಜಾಗವನ್ನು ಇಸ್ಕಾನ್ ಸಂಸ್ಥೆಯವರಿಗೆ ನೀಡುವ ಮೊದಲು ಸದರಿ ಜಾಗಕ್ಕೆ ಹೊಂದಿಕೊಂಡಂತೆ ಯಾವುದೇ ದೇವಸ್ಥಾನ/ಧಾರ್ಮಿಕ ಕೇಂದ್ರಗಳು/ಮಠ ಮಂದಿರಗಳಿಗೆ ಜಾಗವನ್ನು ನೀಡಲಾಗಿರುವುದಿಲ್ಲ. ಇಸ್ಕಾನ್ ಸಂಸ್ಥೆಯವರಿಗೆ ಮಂಜೂರು ಮಾಡುವ ಮೊದಲೇ ಸದರಿ ಜಾಗದಲ್ಲಿ ಮಾಂಡವ್ಯ ಋಷಿಮುನಿಗಳಿಗೆ ಮಠವನ್ನು ನಿರ್ಮಾಣ ಮಾಡಲು ಅನುಮತಿ ನೀಡಿರುವುದಿಲ್ಲ. |
| ಈ) | ಸದರಿ ಜಾಗಕ್ಕೂ ಭವಾನಿ ದೇವಸ್ಥಾನ ಹಾಗೂ ಇತರೆ ದೇವಸ್ಥಾನಗಳಿಗೂ ಮತ್ತು ಧಾರ್ಮಿಕ ಕೇಂದ್ರಗಳಿಗೆ ಇರುವ ಸಂಬಂಧಗಳೇನು? (ಸಂಪೂರ್ಣ ಮಾಹಿತಿಯನ್ನು ಒದಗಿಸುವುದು) | ಸದರಿ ಜಾಗಕ್ಕೂ ಭವಾನಿ ದೇವಸ್ಥಾನ ಹಾಗೂ ಇತರೆ ದೇವಸ್ಥಾನಗಳಿಗೂ ಮತ್ತು ಧಾರ್ಮಿಕ ಕೇಂದ್ರಗಳಿಗೂ ಯಾವುದೇ ಸಂಬಂಧಗಳಿರುವುದಿಲ್ಲ. |

ಸಂಖ್ಯೆ: ಆರ್‌ಡಿ 261 ಎಲ್‌ಜಿಕ್ಯೂ 2022

(ಆರ್. ಅಶೋಕ)
ಕಂದಾಯ ಸಚಿವರು